ದಿನಾಂಕಃ 14.10.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ 4ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಪಿ.ಯೂ.ಸಿ ವರೆಗೆ ಓದಿರುತ್ತೇನೆ. ನನಗೆ ಕನ್ನಡ ಮತ್ತು ಇಂಗ್ಲೀಷ್ ಓದಲು ಮತ್ತು ಬರೆಯಲು ಬರುತ್ತದೆ. ನನ್ನ ತಂದೆ ತೀರಿಕೊಂಡಾಗ ನನ್ನ ವಯಸ್ಸು 30 ವರ್ಷ ಇತ್ತು. ನನ್ನ ತಂದೆ ತೀರಿಕೊಂಡ ನಂತರ ನನ್ನ ತಾಯಿ, ಸಹೋದರರು ಹಾಗೂ ಸಹೋದರಿಯರು ಎಲ್ಲರೂ ಜಂಟಿ ಕುಟುಂಬದಲ್ಲಿ ವಾಸವಾಗಿರುತ್ತೇವೆ ಎಂದರೆ ನಿಜ. ಲೋಳಸೂರ ಗ್ರಾಮದಲ್ಲಿ ನಮಗೆ 4 ಜಮೀನುಗಳು ಇರುತ್ತವೆ ಎಂದರೆ ಸಾಕ್ಷಿಯು 15 ಜಮೀನುಗಳು ಇರುತ್ತವೆ ಎಂದು ನುಡಿಯುತ್ತಾರೆ. ಅರಭಾಂವಿ ಗ್ರಾಮದಲ್ಲಿ 3 ಜಮೀನು ಇರುತ್ತವೆ ಎಂದರೆ ನಿಜ. ಸದರಿ ಮೇಲೆ ಹೇಳಿದ ಜಮೀನುಗಳ ಪಹಣಿ ಪತ್ರಿಕೆಗಳಲ್ಲಿ ನಮ್ಮ ಎಲ್ಲ ಅಂದರೆ ಸಹೋದರರ ಮತ್ತು ಸಹೋದರಿಯರ ಹೆಸರು ಇರುವುದಿಲ್ಲ.

ಲೋಳಸೂರ ಗ್ರಾಮದ ರಿ.ಸ.ನಂ.247, 149, 248/4, 138 ಜಮೀನುಗಳ ಪಹಣಿ ಪತ್ರಿಕೆಗಳಲ್ಲಿ ನಮ್ಮ ಆರು ಜನ ಸಹೋದರರ ಹೆಸರು ಇರುತ್ತದೆ. ಆದರೆ ಅಕ್ಕ-ತಂಗಿಯರ ಹಾಗೂ ತಾಯಿಯ ಹೆಸರು ಇರುವುದಿಲ್ಲ. ಸಾಕ್ಷಿ ಮುಂದುವರೆದು ಅವು ಒಟ್ಟು ಕುಟುಂಬದ ಆಸ್ತಿಯಾಗಿರುತ್ತವೆ ಎಂದು ನುಡಿಯುತ್ತಾರೆ. ಅರಭಾಂವಿ ಗ್ರಾಮದ ರಿ.ಸ.ನಂ.78/10, 78/1ಕ/1ಬ, 78/1ಕ/1ಬ/2 ಜಮೀನುಗಳ ಪಹಣಿ ಪತ್ರಿಕೆಗಳಲ್ಲಿ ನಮ್ಮ ಎಲ್ಲಾ ಸಹೋದರರು ಹಾಗೂ ಸಹೋದರಿಯರು ಮತ್ತು ತಾಯಿಯ ಹೆಸರು ಇರುತ್ತದೆಯಾ ಎಂದರೆ ಸಾಕ್ಷಿಯು ನಮ್ಮ ಎಲ್ಲಾ ಸಹೋದರರ ಹೆಸರು ಮಾತ್ರ ದಾಖಲಿದ್ದು, ಸಹೋದರರಿಯರ ಹಾಗೂ ತಾಯಿಯ ಹೆಸರು ಇರುವುದಿಲ್ಲ ಎಂದು ನುಡಿಯುತ್ತಾರೆ.

ಡೈರಿ ನಂ.1644 ಆದ ಬಗ್ಗೆ ನನಗೆ ಗೊತ್ತಿಲ್ಲ. 1976 ರಲ್ಲಿ ನಮ್ಮ ತಂದೆ ತೀರಿಕೊಂಡ ನಂತರ ನಾವು 1987 ರ ವರೆಗೆ ಜಂಟಿಯಾಗಿ ವಾಸವಾಗಿರುತ್ತೇವೆ ಎಂದರೆ ಸಾಕ್ಷಿಯು ನಾವು ಕೇವಲ ಅಡಿಗೆ ಸಲುವಾಗಿ ಮಾತ್ರ ಬೇರೆ ವಾಸವಾಗಿದ್ದು, ಆದರೆ ಈಹೊತ್ತಿಗೂ ಸಹ ಜಂಟಿ ಕುಟುಂಬದಲ್ಲಿ ಮುಂದುವರೆದಿರುತ್ತೇವೆ ಎಂದು ನುಡಿಯುತ್ತಾರೆ. 1987 ರವರೆಗಿನ ದಾವಾ ಆಸ್ತಿಗಳ ಪಹಣಿ ಪತ್ರಿಕೆಯನ್ನು ನಾನು ನೋಡಿಕೊಂಡು ಬಂದಿರುತ್ತೇನೆ ಎಂದರೆ ನಿಜ.

ನಾನು ಘಟಪ್ರಭಾ ಸಕ್ಕರೆ ಕಾರಖಾನೆಯಲ್ಲಿ 36 ವರ್ಷಗಳ ಕಾಲ ಸೇವೆ ಸಲ್ಲಿಸಿರುತ್ತೇನೆ. ನಾನು ಸನ್ 1980 ರಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೆ. ನಾನು ಕೆಲಸಕ್ಕೆ ಸೇರಿದ ನಂತರ ಎಷ್ಟು ವರ್ಷಗಳ ಕಾಲ ನಮ್ಮ ಸಹೋದರರೊಂದಿಗೆ ಜಂಟಿಯಾಗಿ ವಾಸವಾಗಿದ್ದೆ ಎಂದರೆ ಸಾಕ್ಷಿಯು ಈ ಹೊತ್ತಿಗೂ ಯಾವುದೇ ಪಾಲು ಆಗಿರುವುದಿಲ್ಲ, ಜಂಟಿಯಾಗಿ ವಾಸವಾಗಿರುತ್ತೇವೆ ಎಂದು ನುಡಿಯುತ್ತಾರೆ. 1987 ರಿಂದ 1 ಮತ್ತು 2ನೇ ಪ್ರತಿವಾದಿಯರು ದಾವಾ ಆಸ್ತಿ ಅ.ನಂ.8 ರಿಂದ 14 ನೇದ್ದವುಗಳನ್ನು ತಮ್ಮ ಸ್ವಂತ ಆದಾಯದಿಂದ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳಲ್ಲಿ 1 ಮತ್ತು 2ನೇ ಪ್ರತಿವಾದಿಯರ ಹೆಸರು ಇರುತ್ತವೆ ಎಂದರೆ ಸಾಕ್ಷಿಯು ಅವರು ಮನೆಯ ಹಿರಿಯ ಮಕ್ಕಳು ಆಗಿದ್ದರಿಂದ ಅವರ ಹೆಸರಿಗೆ ಖರೀದಿಸಲಾಗಿರುತ್ತದೆ ಎಂದು ನುಡಿಯುತ್ತಾರೆ.

ಲೋಳಸೂರ ಗ್ರಾಮದ ರಿ.ಸ.ನಂ.247, 248/4, 149, 138 ಹಾಗೂ ಅರಭಾಂವಿ ಗ್ರಾಮದ ರಿ.ಸ.ನಂ.78/10 ಜಮೀನುಗಳು ನನ್ನ ಹಾಗೂ ನನ್ನ ಸಹೋದರರಾದ ಬಾಳಪ್ಪ ಮತ್ತು ಭೀಮಪ್ಪ ರವರ ಪಾಲಿಗೆ ಬಂದಿರುತ್ತವೆ ಎಂದರೆ ಸಾಕ್ಷಿಯು ಈ ಹೊತ್ತಿಗೂ ಯಾವುದೇ ಪಾಲು ವಾಟ್ನಿಯಾಗಿರುವುದಿಲ್ಲ ಎಂದು

ನುಡಿಯುತ್ತಾರೆ. ನಮ್ಮ ತಾಯಿಯು ನಮ್ಮ 4 ಜನರ ಜೊತೆಗೆ ಮಾತ್ರ ವಾಸವಾಗಿದ್ದಳು ಎಂದರೆ ಸರಿಯಲ್ಲ.

4ನೇ ಪ್ರತಿವಾದಿ ಕೆ.ಎಸ್.ಆರ್.ಟಿ.ಸಿಯಲ್ಲಿ ನೌಕರಿ ಮಾಡುತ್ತಿದ್ದ ಎಂದರೆ ನಿಜ. ಅವರು ದಿನಾಲು ಲೋಳಸೂರದಿಂದ ಗೋಕಾಕಕ್ಕೆ ಹೋಗಿ-ಬಂದು ಮಾಡುತ್ತಿದ್ದರು ಎಂದರೆ ನಿಜ. 1989 ರಿಂದ ನಾವೆಲ್ಲರೂ ಬೇರೆ ಬೇರೆಯಾಗಿ ವಾಸವಾಗಿದ್ದೇವೆ ಎಂದರೆ ಸಾಕ್ಷಿಯು ಅಡಿಗೆ ಕುರಿತು ಮಾತ್ರ ಬೇರೆಯಾಗಿ ವಾಸವಾಗಿದ್ದೇವೆ ಎಂದು ನುಡಿಯುತ್ತಾರೆ. 1989 ರಿಂದ ದಾವಾ ಆಸ್ತಿಗಳಿಗೆ ಸಂಬಂಧಿಸಿದಂತೆ ನಮ್ಮೆಲ್ಲರ ಹೆಸರುಗಳು ಬೇರೆ ಬೇರೆಯಾಗಿ ದಾಖಲಾಗಿರುತ್ತವೆ ಎಂದರೆ ಸಾಕ್ಷಿಯು ಹಿರಿಯರ ಹೆಸರಿಗೆ ದಾಖಲಾಗಿರುತ್ತವೆ ಎಂದು ನುಡಿಯುತ್ತಾರೆ. ಸನ್ 1989 ರಿಂದ ದಾವಾ ಆಸ್ತಿಗಳು ಯಾರ ಹೆಸರಿಗೆ ದಾಖಲಾಗಿರುತ್ತವೆ ಅವರೇ ಸರಕಾರಕ್ಕೆ ಕಂದಾಯ ಪಾವತಿ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
2ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ